ಅಧ್ಯಕ್ಷರು : ಸನ್ಮಾನ್ಯ ಉಪನಾಯಕರು ಈಗಾಗಲೇ ಹೇಳಿದ್ದಾರೆ. ಸಭಾನಾಯಕರು ಸಮಗ್ರವಾದ ಹೇಳಿಕೆಯನ್ನು ಈ ಸದನದಲ್ಲಿ ಕೊಡುತ್ತಾರೆ .ನಾನು ಈಗಾಗಲೇ ಪ್ರಸ್ತಾಪ ಮಾಡಿದಂತೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ ಎಂಬ ಒಂದು ಅಪಾದನೆಗೆ ನಾನು ಗುರಿಯಾಗಬಾರದು ಎಂದು ಪ್ರಸ್ತಾಪವಾಗಲಿ ಎಂದು ಕಾನೂನಿನ ಚೌಕಟ್ಟು ಮೀರಿ ರಾಜ್ಯದ ಹಿತ ಗಮನದಲ್ಲಿಟ್ಟುಕೊಂಡು ಇದಕ್ಕೆ ಅವಕಾಶ ಕೊಟ್ಟಿದ್ದೇನೆ. ತಮ್ಮ ಎಲ್ಲಾ ಭಾವನೆಗಳನ್ನು ಎಲ್ಲಾ ಅನಿಸಿಕೆಗಳನ್ನು ಸನ್ಮಾನ್ಯ ಸಭಾನಾಯಕರು ಬಂದು ಹೇಳಿಕೆ ಕೊಡುವಂತಹ ಸಂದರ್ಭದಲ್ಲಿ ಈ ವಿಷಯವನ್ನು ಚರ್ಚೆಗೆತ್ತಿಕೊಳ್ಳುವಂತಹ ಸಂದರ್ಭದಲ್ಲಿ ಪುನರವ್ಯಕ್ತಪಡಿಸುಬಹುದು. ಇನ್ನು ಆಸಕ್ತ ಸದಸ್ಯರಿರುವಂಥವರಿಗೂ ಆಗ ಅವಕಾಶ ಏರ್ಪಾಟು ಮಾಡೋಣ. ತಾವೆಲ್ಲ ದಯಮಾಡಿ ಈಗ ಸಹಕರಿಸಬೇಕು. ಪ್ರಶ್ನೋತ್ತರ ಕೂಡ ಈ ಸದನದ ಗೌರವಾನ್ವಿತ ಸದಸ್ಯರ ಪ್ರಮುಖವಾದ ಹಕ್ಕು. ಅದರ ಚಲಾವಣೆಗೆ ನಿಮ್ಮೆಲ್ಲ ಸಹಕಾರ ಕೋರುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

1995 ಜನವರಿಯಿಂದ 95 ಜೂನರವರೆಗೆ ನಡೆದ ಡಕಾಯಿತಿಗಳು

76 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995 ಜನವರಿಯಿಂದ 1995 ಜೂನ್ ವರೆಗೆ ರಾಜ್ಯದಲ್ಲಿ ನಡೆದಿರುವ ಡಕಾಯಿತಿಗಳೆಷ್ಟು, ಹಾಗೂ ಡಕಾಯಿತಿಗಳು ಎಲ್ಲೆಲ್ಲಿ ನಡೆದಿವೆ. (ಸ್ಥಳಗಳ ಹೆಸರು ಮತ್ತು ಡಕಾಯಿತರ ಸಂಖ್ಯೆ ತಿಳಿಸುವುದು).*

ಆ) *ಈ ಡಕಾಯಿತಿಗಳಲ್ಲಿ ಉಂಟಾಗಿರುವ ಸಾವು ಮತ್ತು ಅಪಹರಣದ ಮೌಲ್ಯಗಳೆಷ್ಟು? (ಸ್ಥಳಗಳ ಹೆಸರು ಮತ್ತು ಡಕಾಯಿತರ ಸಂಖ್ಯೆ ತಿಳಿಸುವುದು)*

ಇ) *ಈ ಡಕಾಯಿತಿಗಳಲ್ಲಿ ಎಷ್ಟು ಡಕಾಯಿತರನ್ನು ಬಂಧಿಸಲಾಗಿದೆ?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಮಂತ್ರಿಗಳು) :

ಅ) 71.

ವಿವರಗಳನ್ನು ಅನುಬಂಧದಲ್ಲಿ-ಅ ಲಗತ್ತಿಸಿದೆ.

ಆ) 6 ಸಾವುಗಳು. ಅಪಹರಣದ ಮೌಲ್ಯ ರೂ. 85,41,915-00 ವಿವರಗಳನ್ನು ಅನುಬಂಧ - 4 ಲಗತ್ತಿಸಿದೆ.

ಇ) 61.

ಅನುಬಂಧ

ಕೋಲಾರ ಜಿಲ್ಲೆಯಲ್ಲಿ ಡಿಸೆಂಬರ್ 1994ರಿಂದ ಇಲ್ಲಿಯವರೆಗೆ ವರದಿಯಾಗಿರುವ ಪ್ರಕರಣಗಳ ವಿವರ.

ಪ್ರಕರಣ	*ಕೋಲಾರ ಜಿಲ್ಲೆಯಲ್ಲಿ ವರದಿಯಾಗಿರುವುದು*	*ಕೆ.ಜಿ.ಎಫ್.ಘಟಕದಲ್ಲಿ ವರದಿಯಾಗಿರವುದು*
ಕೊಲೆ	60	9
ದರೋಡೆ	12	2
ಕಳ್ಳತನ	16	3
ಹೆಚ್.ಬಿ. ಮತ್ತು ರಾತ್ರಿ ಕಳ್ಳತನ	31	-
ಸುಲಿಗೆ	-	2
ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ಜನರ ಮೇಲಿನ ದೌರ್ಜನ್ಯ	9	10
ಮತೀಯ ಗಲಭೆ	2	-
ಗಂಧದ ಮರದ ಕಳ್ಳಸಾಗಣೆ	5	17
ಕಳ್ಳಭಟ್ಟಿ ಪ್ರಕರಣ	30	21
ಖೋಟಾನೋಟು ಪ್ರಕರಣ	4	1
ಒಟ್ಟು	**169**	**65**

ANNEXURE 'A'

List of Professional Dacoities Reported/ Detected during 1995 (Police Station-place of occurrence only)

Sl No	*District Police Station*	*Crime No*	*Year*	*Place of occurrence*
1	Bangalore City Adugodi PS.	84	95	In Front of UCO Bank-Madival Check Post.
2	Bangalore City Banasawadi PS	179	95	9th B Main Road, 1st Stage HRBR Layout, Bangalroe.
3	Bangalore City Banasawadi PS	180	95	No.421, 9th B Main 1st Stage HRBR Layout, Bangalore.
4	Bangalore City Banasawadi PS	181	95	No.417,9th B Main Road, HRBR Layout 1st Stage, Bangalore.
5	Bangalore City Banasawadi PS	183	95	No.159, 8th Street, Bank Avenue Babasab Palya, B'lore.
6	Bangalore City Chickpet PS.	39	95	Sulthanpet
7	Bangalore City N.T.Pet PS	4	95	N.T. Pet limits.
8	Bangalore City Ulsoor Ps	124	95	Ulsoor Busstand on O.M.R.Road.
9	Bangalore District Devanahalli PS	30	95	Between Vijayapur Devenahalli Road.
10	Bangalore District Hoskote PS	306	95	Boodigere Cross, Devana-halli Road.
11	Bangalore District Kanakapura PS	6	95	Kanakapuura
12	Bangalore District Kanankapura PS	7	95	Kanakapura
13	Bangalore District Nandagudi PS	74	95	Kalkare Grama
14	Bangalore District Nelamangala PS	259	95	Dasanapura Grama
15	Bangalore Dist. Satanur PS	1	95	Satanur PS limits.
16	Bidar Dist Humnabad PS	62	95	On Humnabad-Gulbarga State High Way.
17	Bidar Dist Kamalanagar PS	7	95	Between Torana Hollsamudra Village.

18	Bidar Dist Kushnoor PS	41	95	Near Hippalgaon Cross.
19	Bidar Dist Mannekhalli PS	20	95	
20	Bidar Dist Mudbi PS	2	95	Kalkhora Village.
21	Belgaum District Belgaum Rural PS	9	95	Desura Belgaum(R)PS limits.
22	Belgaum Dist Gokak Town PS	52	95	Guruvarpeth, Gokak.
23	Belgaum Dist. Malmaruti PS.	10	95	Shreenagar-Belgaum.
24	Belgaum Dist Nippani PS.	31	95	R/o Savant Colony, Nippani.
25	Chitradurga Dist	3	95	Aralikatti Cross Amimangala PS
26	Chitradurga Dist Davanagere Rural PS.	13	95	Near Hunasekatte.
27	Chitradurga Dist Davanagere Rural PS.	231	95	Vinayaka Extn. Vidyanagar.
28	Chitradurga Dist Davanagere Town.	98	95	N.R.Road, Davanagere.
29	Chitradurga Dist Jagalur PS.	13	95	Jagalur Town.
30	Dharwad Dist Byadagi PS	29	95	Chitra Village on P.B. Road
31	Dharwad Dist Dharwad Rural PS	24	95	Dharwad Goa Road.
32	Dharwad Dist Herekerur PS	17	95	Herekerur, near Durgamma temple.
33	Dharwad Dist Hubli Rural PS.	65	95	Near Adaragunchi Village.
34	Dharwad Dist Kalaghatagi PS.	52	95	Hubli-Karwar Road.
35	Dharwad Dist Shiggaon PS.	4	95	P.B. Road.
36	Gulbarga Dist Kupkunte PS.	22	95	Cement Factory,Kupkunte.
37	Gulbarga Dist Mudhol PS.	22	95	Sedam-Kundangol Main Road.

38	Gulbarga Dist Shohapur PS	39	95	Sagara Grama.
39	Hubli-Dharwad City Kasaba Peth Ps.	34	95	Banni Mahakali Nagar
40	Hubli-Dharwad City Vidyanagar PS.	200	95	Vidyanagar PS limits
41	K.G.F., BEML PS	21	95	Chaitamyapuram Extn.
42	K.G.F.Marikuppam PS		95	B.G.M.L
43	Kolar Dist, Bagepalli PS	83	95	Bagepalli Town Vth Block.
44	Kolar Dist Bagepalli PS.	47	95	Outskirts of Bagepally Town.
45	Kolar District Bagepally PS.	48	95	Outskirts of Bagepally Town.
46	Kolar Dist Chickaballapur(R) PS	17	95	Near Dobbespet
47	Kolar Dist Gowribidanur PS	87	95	Near Hoskote Village.
48	Kolar Dist Gowribidanur PS	85	95	Near Hoskote, Village.
49	Kolar Dist Gowribidnur PS.	85	95	Near Hoskote, Village.
50	Kolar Dist Malur PS	3	95	Kundenahalli Village.
51	Kolar Dist Pathapalya PS.	11	95	Racheruruvu Village.
52	Bellary Dist Bellary Railway PS.	21	95	Between Bellary and Hagari Rly. Stations.
53	Karnataka Rly. Police Hubli R PS	13	95	Rly P.M. No. 389/12-14. Between Dharwad and Byrakoppa Rly. Stn.
54	Karnataka Railway Police Wadi PS	52	95	Between Sollapur and Takkeri Wadi. (Rajkote Express Train).
55	Kodagu Dist Virajpet Rural PS.	55	95	Bilugunda Village.
56	Mandya Dist Arakere PS	31	95	Sri Bhyraveshwara Khadi and Village Industrial Assn.
57	Mandya Dist.Maddur PS	73	95	Maddur
58	Mandya Dist	56	95	Near Kodishetty Pura. Mandya Rural PS.

59	Mysore City Kuvempunagar PS.	22	95	Kuvempunagar, near Petrol Bank.
60	Mysore City Udayagiri PS	55	95	"C" group Workers Layout, Kalyánagirinagar, Mysore.
61	Mysore Dist Kollegal PS	6	95	on Gopinathapuram Road (Dudu Duduki)
62	Mysore Dist Ramapura PS.	13	95	Kollegal Taluk
63	Raichur Dist Market Yard PS	63	95	Jalalnagar,Raichur Situated on Gadwal Road.
64	Raichur Dist Munirabad PS	11	95	Near Hillock on Koppal.
65	Raichur Dist Munirabad PS.	40	95	Koppal-Gangavathi Road.
66	Raichur Dist Sindhanoor PS	154	95	Sindhanoor
67	Raichur Dist Somwarpet PS	36	95	Manikprabhu Layout (outskirts-Raichur City)
68	Shimoga Dist Kumsi PS.	98	95	Thupur Guddadamane Village.
69	Tumkur District N.E.P.S.	120	95	Batawadi
70	Tumkur Dist Pavagada PS.	1	95	Pavagada.
71	Tumkur Dist Tumkur New EXtn.PS.	98	95	Guru Layout Tumkur.

ANNEXURE - B

NO. OF PERSONS (CIVILIAN) KILLED IN DACOITY CASES

S.No.	Police Station	Cr. No.	Name of the person
1.	Dharwad Rural P.S Dharwad Dist.	24/95	Maharudrappa Shivappa Angadi, 33 yrs.
2.	Kalghatagi P.S. Dharwad Dist.	52/95	Driver of Lorry
3.	Shahapur P.S. Gulbarga Dist.	39/95	Sanganna S/o Shivappa Surapura
4.	Davangere (R) P.S. Chitradurga Dist.	231/95	Siddesh
5.	Vidyanagar P.S. Hubli-Dharwad City	200/95	Basavaraj Manavally
6.	Chikkaballapura (R) P.S.	17/95	Baliram (Driver of Lorry No. AP 13-T-5128
	Total property lost in professional Dacoity cases reported during 1995 upto 30.6.1995	:	Rs. 85,41,915/-
	No. of persons arrested	:	61

ಶ್ರೀ ಬಿ.ಬಿ. ಶಿವಪ್ಪ : ಅಧ್ಯಕ್ಷರೇ ಮಾನ್ಯ ಗೃಹಮಂತ್ರಿಗಳು ಜನವರಿ ಜೂನ್ 17ರಿಂದ ಇಲ್ಲಿಯವರೆಗೆ 71 ಡಕಾಯಿತಿ ಪ್ರಕರಣಗಳನ್ನು ಗುರುತುಮಾಡಿ ತೋರಿಸಿದ್ದಾರೆ. ಅದರಲ್ಲಿ 61 ಪ್ರಕರಣಗಳಲ್ಲಿ ಡಕಾಯಿತರನ್ನು ಬಂಧಿಸಲಾಗಿದೆ, 6 ಸಾವುಗಳಾಗಿವೆ ಎನ್ನುವ ಅಂಶವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಗೃಹಮಂತ್ರಿಗಳಲ್ಲಿ ನಾನು ಮತ್ತೊಂದು ಪ್ರಶ್ನೆ ಕೇಳಲು ಇಷ್ಟಪಡುತ್ತೇನೆ. ಇದರಲ್ಲಿ ದಾಖಲಾಗಿರುವ ಕೇಸಗಳೆಷ್ಟು? 61 ಪ್ರಕರಣಗಳಲ್ಲಿ ಎಷ್ಟು ಜನಕ್ಕೆ ಸಜಾ ಆಗಿದೆ? ಇದರ ಬಗ್ಗೆ ಮಾಹಿತಿ ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೇ ಎಲ್ಲಾ ಡಕಾಯಿತಿ ಪ್ರಕರಣಗಳೂ ಕೇಸ್ ದಾಖಲಾತಿ ಆಗಿವೆ. ಸಜೆ ಆಗಿರುವ ಪ್ರಶ್ನೆಗೆ ಪ್ರತ್ಯೇಕ ಉತ್ತರ ಕೊಡುತ್ತೇನೆ, ಅದು ಕಾನೂನು ಇಲಾಖೆಗೆ ಸಂಬಂಧಿಸಿರುತ್ತದೆ. ನಾನು ಮಾಹಿತಿ ತರಿಸಿ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಅಧ್ಯಕ್ಷರೇ ಇತ್ತೀಚೆಗೆ ರಾಜ್ಯದಲ್ಲಿ ಡಕಾಯಿತಿಗಳು ಜಾಸ್ತಿ ಆಗುತ್ತಿರುವ ವಾತಾವರಣ ನಿರ್ಮಾಣವಾಗುತ್ತಿದೆ. ಹಿಂದಿನ ದಿವಸಗಳಲ್ಲಿ ನೋಡಿದಾಗ ನಗರ ಮತ್ತು ನಗರದ ಸುತ್ತಮುತ್ತಲಿನ ಕೆಲವು ಕಿಮೀ ಪರಿಮಿತಿಯೊಳಗೆ ಆಗುತ್ತಿದ್ದ ಪ್ರಕರಣಗಳು ಇವತ್ತು ಜಿಲ್ಲಾಮಟ್ಟದಲ್ಲಿ ಕೂಡ ತಲುಪಿದೆ. ಬಹುತೇಕ ನಾನು ಹೇಳುವುದಾದರೆ ನಮ್ಮ ಮಲೆನಾಡು ಏರಿಯಾದಲ್ಲಿ ಡಕಾಯಿತಿ ಪ್ರಕರಣಗಳಿಗೆ ಅವಕಾಶ ಇರಲಿಲ್ಲ. ಇವತ್ತು ಅಲ್ಲೂ ಕೂಡ ಅಲ್ಲಿ ಇಲ್ಲಿ ಈಗಾಗಲೇ ಸಣ್ಣದಾಗಿ ಪ್ರಾರಂಭವಾಗಿರುವ ಈ ಸಂದರ್ಭದಲ್ಲಿ ಮಾನ್ಯ ಗೃಹಮಂತ್ರಿಗಳು ಬೇರೆ ಏನಾದರೂ ವ್ಯವಸ್ಥೆ ಮಾಡಿ ಅಥವಾ ಉನ್ನತ ಅಧಿಕಾರಿಗಳ ಟೀಮನ್ನಾದರೂ ಸಿದ್ಧಪಡಿಸಿ, ಯಾವುದಾದರೂ ರೀತಿಯಲ್ಲಿ, ಇಡೀ ರಾಜ್ಯದಲ್ಲಿ ಹಬ್ಬುವಂತಹ ವಾತಾವರಣ ಏನಿದೆ ಅದನ್ನು ನಿಲ್ಲಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ. ಮತ್ತು ನನ್ನ ಅನಿಸಿಕೆ, ಇತ್ತೀಚಿನ ಕೆಲವು ದಿನಗಳಲ್ಲಿ ಇದಕ್ಕೆ ಕೆಲವು ರಾಜಕೀಯ ಪ್ರೇರಿತ ಬೆಂಬಲ ಇದೆ ಎಂದು ಗಮನಕ್ಕೆ ಬಂದಿದೆ. ರಾಜಕಾರಣಗಳು ಕೂಡ ಕೆಲವು ಸಂದರ್ಭದಲ್ಲಿ ಇಂತಹ ವ್ಯವಹಾರಗಳಿಗೆ ಕೈಹಾಕುವಾಗ ಅಧಿಕಾರಿಗಳಿಗೆ ಅದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಸ್ವಲ್ಪ ಕಷ್ಟದ ಪರಿಸ್ಥಿತಿ ಉದ್ಭವಾಗುತ್ತದೆ. ಇಂತಹ ಸಂದರ್ಭದಲ್ಲಿ ರಾಜಕಾರಣಿಗಳಿ ಪ್ರವೇಶ ಮಾಡುವುದು ಮೊದಲನೆ ತಪ್ಪು. ಎರಡನೆಯದು ಅಧಿಕಾರಿಗಳು ಇಂತಹ ಸಂದರ್ಭ ಬಂದಾಗ ಯಾವುದೇ ರಾಜಕಾರಣಿಗಳ ಮಾತಿಗೆ ಬೆಲೆಕೊಡದೆ ಕಾನೂನು ಚೌಕಟ್ಟಿನಲ್ಲಿ ದಂಡನೆ ವಿಧಿಸುವಂತಹ ಸಂಪೂರ್ಣ ಅಧಿಕಾರವನ್ನು ಅಧಿಕಾರಿಗಳನ್ನು ನಂಬಿ ಅಂತಹ ಅಧಿಕಾರಿಗಳ ಕೈಗೆ ಕೊಡಬೇಕೆಂದು ನಾನು ಗೃಹಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೇ ಮಾನ್ಯ ಶಿವಪ್ಪನವರು ಇತ್ತೀಚಿನ ದಿನಗಳಲ್ಲಿ ಡಕಾಯಿತಿಗಳು ಹೆಚ್ಚಾಗುತ್ತವೆಂದು ಹೇಳಿದ್ದಾರೆ. ಅದು ಸತ್ಯಾಂಶವಲ್ಲ. 1992ರಲ್ಲಿ 93 ಪ್ರಕರಣ 6 ತಿಂಗಳಲ್ಲಿ ಆಗಿತ್ತು, 93ರಲ್ಲಿ 68 ಪ್ರಕರಣ ದಾಖಲಾತಿಯಾಗಿವೆ. 94ರಲ್ಲಿ 118 ಪ್ರಕರಣ ದಾಖಲಾಗಿದೆ ಮತ್ತೆ 92ರಲ್ಲಿ 4 ಜನ ಸತ್ತಿದ್ದಾರೆ, 93ರಲ್ಲಿ 5 ಜನ, 94ರಲ್ಲಿ 8 ಜನ ಸತ್ತಿದ್ದಾರೆ. ಆದರೆ ಈ ಪ್ರಕರಣಗಳು ಆಗುತ್ತಿರುವ ಬಗ್ಗೆ ಸರ್ಕಾರಕ್ಕೂ ಸಹಿತ ತುಂಬ ದುಃಖ ಇದೆ. ಇದನ್ನು ತಡೆಗಟ್ಟಲು ಎಲ್ಲ ಕ್ರಮವನ್ನು ತೆಗೆದುಕೊಳ್ಳುವ ಭರವಸೆಯನ್ನು ಈ ಸದನಕ್ಕೆ ತಮ್ಮ ಮೂಲಕ ಮಾನ್ಯ ಸದಸ್ಯರಿಗೂ ನಾನು ಕೊಡಲಿಕ್ಕೆ ಬಯಸುತ್ತೇನೆ. ನಗರದಿಂದ ಜಿಲ್ಲೆಗಳಿಗೆ ಹೋಗುತ್ತಿದೆ ಮತ್ತು ಮಲೆನಾಡಿನ ಪ್ರದೇಶದಲ್ಲೂ ಇದು ಹಬ್ಬುತ್ತಿದೆ ಎಂದಿದ್ದಾರೆ. ಇದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ಇದನ್ನು ಸಂಪೂರ್ಣವಾಗಿ ತಡೆಗಟ್ಟಬೇಕೆಂದು ನಾವು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ರಾಜ್ಯದಲ್ಲಿ ಡಕಾಯಿತಿಗಳನ್ನು ತಡೆಗಟ್ಟಲಿಕ್ಕೆ ಎಂದು ಒಬ್ಬ ಅಡಿಶನಲ್ ಡೈರೆಕ್ಟರ್ ಜನರಲ್ ಆಫ್ ಪೋಲಿಸರನ್ನು ಡಕಾಯಿತಿ ಪ್ರಿವೆನ್‌ಶನ್ ಡಕಾಯಿತಿ ಡಿಟೆಕ್ಷನ್ ಇದಕ್ಕೆ ಬೇಕಾಗಿರುವ ಒಂದು ವಿಶೇಷವಾದ ಪಡೆಯನ್ನು range ಅಡಿಶನಲ್ ಎಸ್‌ಪಿ ಮತ್ತು ಅಧಿಕಾರಿಗಳ ಹಂತದಲ್ಲಿ ಮಾಡುವುದರ ಜೊತೆಗೆ ಇಡೀ ರಾಜ್ಯಕ್ಕೆ ಒಬ್ಬ ಅಧಿಕಾರಿಯನ್ನು ಇದಕ್ಕೇ ಎಂದು ನಾವು ಕಳೆದ ಒಂದು ತಿಂಗಳೊಳಗೆ ನೇಮಕಾತಿ ಮಾಡಿದ್ದೇವೆ. ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಖಚಿತವಾದ ಅಂಕಿಅಂಶ ನನ್ನ ಹತ್ತಿರ ಇಲ್ಲ. ಸುಮಾರು 300 ಡಕಾಯಿತರು ಈಗಾಗಲೇ ಜೈಲಿನಲ್ಲಿದ್ದಾರೆ. ಅವರನ್ನು ಬಂದು ನೋಡುವ ವಿಸಿಟರ್ಸ್ ಯಾರು? ಅವರಿಗೆ ಯಾರು

ದುಡ್ಡು ಕಳಿಸಿಕೊಡುತ್ತಾರೆ ಇದರ ಬಗ್ಗೆ ನಿಗಾ ಇಟ್ಟು ಉನ್ನತ ಪೋಲಿಸ್ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ ಎಂಬ ವಿಚಾರವನ್ನೂ ಹೇಳಿ, ಡಕಾಯಿತಿ ಪ್ರಿವೆನ್‌ಷನ್, ಹೊರರಾಜ್ಯಗಳಲ್ಲಿ ಪಕ್ಕದ ರಾಜ್ಯಗಳ್ಲಿ ಇವರು ಹೋಗಿ ಅಡಗಿಕೊಳ್ಳುತ್ತಾರೆ. ಅವರನ್ನು ಪತ್ತೆಮಾಡಲೂ ಸಾಕಷ್ಟು ಕ್ರಮ ನಾವು ತಗೊಂಡಿದ್ದೇವೆ. ಸಧ್ಯದಲ್ಲೇ ನಾನು ಬೇರೆ ರಾಜ್ಯದ ಅಧಿಕಾರಿಗಳಲ್ಲಿ ಕರೆಸಿ ನಮ್ಮ ಮಾಹಿತಿ ಅವರ ಮಾಹಿತಿ ಸಹಿತ ನಮ್ಮ ಉನ್ನತ ಮಟ್ಟದ ಅಧಿಕಾರಿಗಳಲ್ಲಿ ಮಾಡಿಸುವುದರ ಜೊತೆಗೆ ಪಕ್ಕದ ಜಿಲ್ಲೆಗಳೇನಿರೆ ಎಸಪಿಗಳು ಡಿಐಜಿಗಳು ಇದನ್ನು ರಿವ್ಯೂ ಮಾಡಬೇಕೆಂಬ ಸೂಚನೆಯನ್ನು ಸಹಿತ ಕೊಟ್ಟಿರುವುದರ ಜೊತೆಗೆ ರಾಜಕಾರಣಿಗಳು ಡಕಾಯಿತರ ಬಿಡುಗಡೆ ಮಾಡುವ ವಿಚಾರದಲ್ಲಿ ಅಥವಾ ಅವರಿಗೆ ಪರೋಕ್ಷವಾಗಿ ಬೆಂಬಲ ಕೊಡುವ ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆ ತರಹ ಹಾರಿಸಿ ಹೇಳಲು ನನ್ನ ಹತ್ತಿರ ಯಾವುದೇ ಪುರಾವೆಗಳಿಲ್ಲ. ಯಾವುದೇ ರಾಜಕಾರಣಿಗಳು ಮತ್ತೊಬ್ಬರು, ಆ ಪುರಾವೆಗಳನ್ನು ಮಾನ್ಯ ಗೌರವಾನ್ವಿತ ಸದಸ್ಯರು ನನಗೆ ಕೊಡುವುದಾದಲ್ಲಿ ನಾನು ಅದನ್ನು ಗೌಪ್ಯವಾಗಿಟ್ಟು ವಿಚಾರಣೆ ಮಾಡಿಸಿ ತಮಗೆ ಮತ್ತು ಮಾನ್ಯ ಸದಸ್ಯರಿಗೆ ಅದರ ಬಗ್ಗೆ ತಿಳಿಸುತ್ತೇನೆ. ನನಗೆ ಗೊತ್ತಿರುವಂತೆ ಆರೀತಿ ಇಲ್ಲ. ಮತ್ತು ಅಧಿಕಾರಿಗಳು ಯಾರಿದ್ದಾರೆ ಇವರಿಗೆ ಸಂಪೂರ್ಣವಾದ ಸ್ವಾತಂತ್ರ್ಯ ಕೊಟ್ಟಿದ್ದೇನೆ. ಮನಸಾರೆ ಹೇಳುತ್ತಿದ್ದೇನೆ, ಯಾವುದೇ ಅಧಿಕಾರಿಯು ಕಾನೂನುಬದ್ಧವಾಗಿ ಕೆಲಸ ಮಾಡುವುದಕ್ಕೆ ಗೌರವಾನ್ವಿತ ಶಾಸಕರಾಗಲಿ, ನಾನಾಗಲೀ ನಮ್ಮ ಸರ್ಕಾರದ ಯಾವುದೇ ಸಚಿವರೂ ಅಡ್ಡಿಯೇನು ಬಂದಿಲ್ಲ. ಆ ರೀತಿ ಏನಾದರೂ ಮಾಹಿತಿ ಅವರ ಬಳಿ ಇದ್ದರೆ ನನಗೆ ಕೊಟ್ಟರೆ ಅದರ ಬಗ್ಗೆ ನಾನು ಸಾಕಷ್ಟು ಕ್ರಮ ತೆಗೆದುಕೊಳ್ಳುವಂತಹ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೇ ತಾ: 13-3-1991 ರಲ್ಲಿ ಮಾನ್ಯ ಸಚಿವರಾದ ಶ್ರೀ ಸಿಂಧ್ಯಾರವರು ಇದೇ ಡಕಾಯಿತಿ ಬಗ್ಗೆ ಈ ರೀತಿ ಮಾತನಾಡಿದ್ದರು. ಅವರು ಏನು ಹೇಳಿದ್ದರು ಎಂದರೆ ದಯವಿಟ್ಟು ಕೇಳಿ. "ಮಾನ್ಯ ಗೃಹಸಚಿವರು ಸದನದಲ್ಲಿರುವುದರಿಂದ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಕಳೆದ 48 ಗಂಟೆಗಳಲ್ಲಿ ಬೆಂಗಳೂರಿನ ಸುತ್ತಮುತ್ತ 6 ಕಡೆ ಡಕಾಯಿತಿಯಾಗಿದೆ, ರಾಮನಗರದಲ್ಲಿ ಡಕಾಯಿತಿ ನಡೆದು ಹಲವು ಜನ ಸತ್ತಿದ್ದಾರೆ. ಕೋಲಾರದಲ್ಲಿ ಡಕಾಯಿತಿಯಾಗಿದೆ.ಮಂಡ್ಯದಲ್ಲಿ ಆಗಿದೆ. ಈರೀತಿ ಡಕಾಯಿತಿ ಆಗುತ್ತಿರುವಾಗ ಸರ್ಕಾರದ ಮೇಲೆ ನಮಗೆ ಸಂಶಯ ಬರಲು ಶುರುವಾಗಿದೆ. ಅದರಲ್ಲೂ ಧರ್ಮಸಿಂಗರವರು ಗೃಹಸಚಿವರಾದ ಮೇಲೆ ಏತಕ್ಕೆ ಹೀಗಾಗುತ್ತಿದೆ ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಸಾಮಾನ್ಯವಾಗಿ ಅಧಿವೇಶನ ನಡೆಯುವಂಥ ಸಂದರ್ಭದಲ್ಲಿ ಎಲ್ಲ ಇಲಾಖೆ ಅಧಿಕಾರಿಗಳಿಗೆ ಸರ್ಕಾರ ಎಚ್ಚರಿಕೆ ಕೊಟ್ಟಿರುತ್ತದೆ. ಕೊನೇಪಕ್ಷ ಅಧಿವೇಶನ ನಡೆಯುವ ಸಂದರ್ಭದಲ್ಲಿ ಈರೀತಿಯ ಘಟನೆಗಳು ನಡೆಯದ ಹಾಗೆ ನಿಮ್ಮನಿಮ್ಮ ಇಲಾಖೆಗಳಲ್ಲಿ ಸ್ವಲ್ಪ ಬಂದೋಬಸ್ತಾಗಿರಿ ಎಂಬ ಸೂಚನೆ ಕೊಟ್ಟಿರುತ್ತದೆ. ಆದರೂ ಆರೀತಿ ಆಗುತ್ತಿಲ್ಲ. ಪ್ರತಿನಿತ್ಯ ಡಕಾಯಿತಿಗಳು ಜಾಸ್ತಿಯಾಗುತ್ತಿವೆ". ಎಂದು ಹೇಳಿ, ಮತ್ತೆ ಮುಂದೆ ಹೇಳುತ್ತಾರೆ. ಅಂದಿನ ಕಾನೂನು ಪರಿಸ್ಥಿತಿ ನೋಡಿ ಮಾನ್ಯ ಸಚಿವರಾದ ಸಿಂಧ್ಯಾರವರು ಹೇಳಿದರು.

(ಗೊಂದಲ)

ರಾಜ್ಯದ ಕಾನೂನು ಪರಿಸ್ಥಿತಿ ಬಹಳ ಚೆನ್ನಾಗಿದೆ,

ಅಧ್ಯಕ್ಷರು : ಸಪ್ಲಿಮೆಂಟರಿ ಕೇಳಿ.

(ಗೊಂದಲ)

ಡಾ|| ಜೀವರಾಜ ಆಳ್ವ : ಅಧ್ಯಕ್ಷರೇ, ಅವರು ಪ್ರಶ್ನೆ ಕೇಳುತ್ತಿರುವುದು, ಸಾಧಾರಣವಾಗಿ ವಿಧಾನಸಭೆ ನಡೆಯುವ ಸಂದರ್ಭದಲ್ಲಾದರೂ ಡಕಾಯಿತಿ ನಿಲ್ಲಿಸುತ್ತೀರಾ ಎಂದು ಕೇಳುತ್ತಿದ್ದಾರೆ.

12.00 ಪಿ.ಎಂ

ಅಧ್ಯಕ್ಷರು : ಜೀವರಾಜ್ ಆಳ್ವ ಅವರ ಸಲಹೆಯನ್ನು ಪಡೆದುಕೊಂಡು ಸದನ ಇರುವಾಗಲಾದರೂ ಡಕಾಯಿತಿ ಆಗದ ಹಾಗೆ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : 1991ರಲ್ಲಿ ನಾನು ವಿಧಾನ ಸಭೆಯ ಉಪನಾಯಕನಾಗಿದ್ದಾಗ ಹೇಳಿರತಕ್ಕಂತಹ ಭಾಷಣವನ್ನು ಅವರು ಓದಿ ಎಚ್ಚರಿಕೆ ಕೊಡುತ್ತಿದ್ದಾರೆ. ಕೊನೇಪಕ್ಷ ವಿಧಾನ ಸಭೆ ನಡೆಯುವಾಗ ಅಷ್ಟೇ ಅಲ್ಲ ಯಾವುದೇ ಸಂದರ್ಭದಲ್ಲೂ ಕೂಡ ಡಕಾಯಿತಿಗಳನ್ನು ತಡೆಗಟ್ಟಲಿಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.
ಅಮರಗೊಳದಲ್ಲಿ ಪೋಲೀಸ್ ಠಾಣೆ ತೆರೆಯುವ ಬಗ್ಗೆ.

77 - ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಮತ್ತು ಕ್ಷೇತ್ರ ಅಮರಗೋಳ ಗ್ರಾಮದಿಂದ ಇರುವುದ ಹಾಗೂ ಬೃಹತ್ತಾಗಿ ನಗರ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪೋಲೀಸರ ಸೇವೆ ಹೆಚ್ಚಿಸುವ ಹಾಗೂ ಹೆಚ್ಚಿನ ಠಾಣೆಯ ಅವಶ್ಯಕತೆಯ ಬಗ್ಗೆ ಸರ್ಕಾರ ಗಮನ ಹರಿಸಿದಯೇ, ಹಾಗಿದ್ದಲ್ಲಿ ಎಷ್ಟು ಪೋಲೀಸ್ ಠಾಣೆಗಳನ್ನು ಪ್ರಾರಂಭಿಸಲು ಯೋಜಿಸಲಾಗಿದ, ಪೂರ್ಣ ಮಾಹಿತಿ ನೀಡುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಹೌದು.

ಆ) ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಸಾಕಷ್ಟು ಪೋಲೀಸ್ ಠಾಣೆಗಳು ಹಾಗೂ ಪೋಲೀಸ್ ಸಿಬ್ಬಂದಿ ಇರುವುದರಿಂದ ಹೆಚ್ಚು ಪೋಲೀಸ್ ಠಾಣೆಗಳನ್ನು ಮಂಜೂರು ಮಾಡುವ ಅವಶ್ಯಕತೆ ಸಧ್ಯ ಇರುವುದಿಲ್ಲ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಹುಬ್ಬಳ್ಳಿ ಧಾರವಾಡ ಮಹಾ ನಗರ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಂತರ 2ನೇ ಮಹಾ ನಗರವಾಗಿದೆ. ಈ ಮಹಾ ನಗರದ ಮಧ್ಯದಲ್ಲಿ ಒಂದು

ಬಸವೇಶ್ವರ ಮಾರುಕಟ್ಟೆ ಅಮರಗೋಳದಲ್ಲಿ ಇಡೀ ಏಷಿಯಾದಲ್ಲಿ ದೊಡ್ಡ ಮಾರುಕಟ್ಟೆ ಬರುತ್ತಿದೆ. ನವನಗರವೆಂಬ ದೊಡ್ಡ ಬಡಾವಣೆ ಎರಡರ ಮಧ್ಯೆ ಬೆಳೆಯುತ್ತಿದೆ. ಈ ಮಧ್ಯದಲ್ಲಿ ನಮ್ಮ ಪೋಲೀಸ್ ಕಮಿಷನರಿಗೆ ಕಟ್ಟಡ ಇಲ್ಲ. ಪೋಲೀಸ್ ಕಮಿಷನರ್‌ರವರ ಕಟ್ಟಡ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ವರ್ಗಾವಣೆಯಾಗುತ್ತಿದೆ. ಅಲ್ಲಿ ಒಂದು ಪೋಲಿಸ್ ಕಮೀಷನರ್‌ರವರ ಕಟ್ಟಡವನ್ನು ಕಟ್ಟಿಸುತ್ತೀರಾ ಎಂದು ಕೇಳುತ್ತಿದ್ದೇನೆ. ಮತ್ತು ಕೊಲೆ ಸುಲಿಗೆಗಳಾಗುತ್ತಿವೆ.....

ಅಧ್ಯಕ್ಷರು : ನಿಮ್ಮ ಪ್ರಶ್ನೆ ನೋಡಿ. ಅಮರಗೋಳದಲ್ಲಿ ಪೋಲೀಸ್ ಠಾಣೆ ಬಗ್ಗೆ ಇದೆ. ಈಗ ಕಮೀಷನರ್ ಹತ್ತಿರಕ್ಕೆ ಹೋದರಲ್ಲ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ : ಹಾಗಿದ್ದಲ್ಲಿ ಪೋಲೀಸರ ಸೇವೆಹೆಚ್ಚಿಸುವ ಹಾಗೂ ಹೆಚ್ಚಿನ ಠಾಣೆಯ ಅವಶ್ಯಕತೆಯ ಬಗ್ಗೆ ಸರಕಾರ ಗಮನ ಹರಿಸಿದೆಯೇ? ಹಾಗಿದ್ದಲ್ಲಿ ಎಷ್ಟು ಪೋಲೀಸ್ ಠಾಣೆಗಳನ್ನು ಪ್ರಾರಂಭಿಸಲು ಯೋಚಿಸಲಾಗದೆ ಎಂಬ ಪೂರ್ಣ ಮಾಹಿತಿ ನೀಡುವುದು ಎಂದು ಪ್ರಶ್ನೆ ಹಾಕಿದ್ದೇನೆ. ಕರ್ನಾಟಕದಲ್ಲಿ 2ನೇ ಮಹಾನಗರವೆಂದು ಹೇಳುತ್ತಿದ್ದೇನೆ. 2ನೇ ಮಹಾ ನಗರದಲ್ಲಿ ಊರಿನ ಮಧ್ಯದಲ್ಲಿ ಕೊಲೆ ದರೋಡೆಗಳಾಗುತ್ತಿವೆ. ಗೋವಾದ ರಸ್ತೆಯಲ್ಲಿ ಹಗಲು ದರೋಡೆಯಾಗಿದೆ. ಹುಬ್ಬಳ್ಳಿ ಬೆಂಗಳೂರು ರಸ್ತೆಯಲ್ಲಿ ದರೋಡೆಯಾಗುತ್ತಿವೆ. ಮನೆಗಳ ದರೋಡೆಯಾಗುತ್ತಿವೆ ಪಿಕಪಾಕೆಟ್ ಆಗುತ್ತಿದೆ ಹೆಣ್ಣುಮಕ್ಕಳ ಚೈನ್ ಕಿತ್ತುಕೊಂಡು ಹೋಗುತ್ತಿದ್ದಾರೆ. ವ್ಯಾಪಾರದ ಸಲುವಾಗಿ ಬಂದ ವ್ಯಾಪಾರಿಗಳ ಕಿಸೆ ಕತ್ತರಿಸುತ್ತಿದ್ದಾರೆ. ಅಲ್ಲಿ ಪೋಲೀಸ್ ಠಾಣೆ ಮತ್ತು ಕಮಿಷನರ್ ಕಚೇರಿ ಆಗಬೇಕು.

ಅಧ್ಯಕ್ಷರು : ಏನಾಗಬೇಕು ಹೇಳಿ. ಪ್ರಶ್ನೋತ್ತರ ಸಮಯದಲ್ಲಿ ಎಲ್ಲರೂ ಭಾಷಣಕ್ಕೆ ಇಳಿದರೆ ನಾನು ಏನು ಮಾಡಬೇಕು ಹೇಳಿ ಹೊಸ ಸದಸ್ಯರಿಗೆ ಹೇಳಬಹುದು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಪೋಲೀಸ್ ಕಮಿಷನರಿಗೆ ಹುಬ್ಬಳ್ಳಿ ಧಾರವಾಡದ ಮಧ್ಯದಲ್ಲಿ ಸ್ವಂತ ಕಟ್ಟಡವನ್ನು ಅದೂ ಅಮರಗೋಳದ ಮಾರುಕಟ್ಟೆಯ ಹತ್ತಿರ ಕಟ್ಟಿಸುತ್ತಾರೋ ಹೇಗೆ?

ಅಧ್ಯಕ್ಷರು : ಅವರು ಪ್ರಶ್ನೆ ಕೇಳಿರುವುದು ಅಮರಗೋಳದಲ್ಲಿ ಪೋಲೀಸ್ ಸ್ಟೇಷನ್ ಬಗ್ಗೆ, ಈಗ ಪೋಲೀಸ್ ಕಮಿಷನರಿಗೆ ಕೇಳುತ್ತಿದ್ದೀರಿ. ಕಮಿಷನರಿಗೆ ಕಟ್ಟಿಕೊಡಲೇಬೇಕು ಹಣಕಾಸಿನ ವ್ಯವಸ್ಥೆ ಮಾಡಿ ಮಾಡಿಕೊಡುತ್ತೇವೆಂದು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರ ಕಾಳಜಿ ನನಗೆ ಅರ್ಥವಾಗಿದೆ. ಅಲ್ಲಿ ಆಗುತ್ತಾ ಇರತಕ್ಕಂತಹ ಕ್ರೈಮ್ಸ ಏನು ಇದೆ ಬೆಂಗಳೂರಿನಲ್ಲಿ ಆಗುತ್ತಿರುತಕ್ಕಂತಹ ಕ್ರೈಮ್ಸ್‌ಗೂ ಅಮರಗೋಳದಲ್ಲಿ ಪೋಲೀಸ್ ಸ್ಟೇಷನ್ ಮಾಡುವುದಕ್ಕೂ ಸಂಬಂಧವಿಲ್ಲ. ನಾನು ಹುಬ್ಬಳ್ಳಿ ನಗರಕ್ಕೆ ಗೃಹ ಮಂತ್ರಿಯಾಗಿ ಹಲವಾರು ಸಾರಿ ಬಂದು ವೀಕ್ಷಣೆ ಮಾಡಿದ್ದೇನೆ. ಅಮರಗೋಳದಲ್ಲಿ ಒಂದು ದೊಡ್ಡ ಎ.ಪಿ.ಎಂ.ಸಿ. ಯಾರ್ಡ್ ಪ್ರಾರಂಭವಾಗಿ ಕೆಲಸ ಮಾಡುತ್ತಾ ಇರತಕ್ಕಂಥಾದ್ದು ಸತ್ಯಾಂಶ ಇದೆ. ಅಲ್ಲಿ ಕೊನೇ ಪಕ್ಷ ಒಂದು ಔಟ್ ಪೋಸ್ಟ್ ಅನ್ನು ಪ್ರಾರಂಭ ಮಾಡುವುದಕ್ಕೆ ಪರಿಶೀಲನೆ ಮಾಡುವುದಕ್ಕೆ ನಾನು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ಪೋಲೀಸ್ ಕಮಿಷನರಿಗೆ ಹುಬ್ಬಳ್ಳಿಯಲ್ಲಿ ಒಳ್ಳೆಯ ಕಟ್ಟಡ ಇರಲಿಲ್ಲ ಈಗ ನಮ್ಮ ಸರಕಾರ ಬಂದ ಮೇಲೆ ಸರಕಾರದ ಅಂಗ ಸಂಸ್ಥೆಯಾದ ಕೆ.ಎಸ್.ಆರ್.ಟಿ.ಸಿ.ಯ ಸುಂದರವಾದ

ಕಟ್ಟಡದಲ್ಲಿ ಪೋಲೀಸ್ ಕಮಿಷನರ್ ಕಛೇರಿಯನ್ನು ಪ್ರಾರಂಭ ಮಾಡಿರುವುದು ನಾನು ಗೃಹ ಮಂತ್ರಿಯಾದ ಮೇಲೆ. ಇದು ತಮಗೂ ಗೊತ್ತಿದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಈಗಾಗಲೇ 3 ಕಡೆಗೆ ಕಮಿಷನರ್ ಕಛೇರಿ ಷಿಫ್ಟ್ ಆಗಿದೆ. ನಾನು ಕೇಳುತ್ತಿರುವುದು ಹುಬ್ಬಳ್ಳಿ ಧಾರವಾಡದ ಮಧ್ಯದಲ್ಲಿ ಕಮಿಷನರ್ ಕಚೇರಿ ಕಟ್ಟಿಸಬೇಕು. ಇದಕ್ಕೆ ಜಾಗದ ಅವಕಾಶ ಇದೆ. ಮಧ್ಯದಲ್ಲಿ ಕಟ್ಟಿಸುತ್ತೀರಾ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಅವರು ನೀವು ಚರ್ಚೆ ಮಾಡಿ ಹಣಕಾಸಿನ ಪರಿಸ್ಥಿತಿ ನೋಡಿ ಮಾಡಿ.

ಬೆಂಗಳೂರು ನಗರದಲ್ಲಿ ಮಹಿಳಾ ಪೋಲೀಸ್ ಕಾನಸ್ಟೇಬಲಗಳು ಮತ್ತು ಸಬ್‌ಇನ್‌ಸ್ಪೆಕ್ಟರ್‌ಗಳು.

78 - ಶ್ರೀಮತಿ ಡಿ.ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕೆಲಸ ಮಾಡುತ್ತಿರುವ ಒಟ್ಟು ಮಹಿಳಾ ಪೋಲೀಸ್ ಕಾನ್ಸ್‌ಟೇಬಲ್ ಹಾಗೂ ಸಬ್-ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು.

ಆ) ಇದು ಈಗಿನ ಹೆಚ್ಚುತ್ತಿರುವ ಅವಶ್ಯಕತೆಗೆ ಅನುಗುಣವಾಗಿದೆಯೆ.

ಇ) ಬೆಂಗಳೂರು ನಗರದಲ್ಲಿ ಮಹಿಳಾ ಪೋಲೀಸ್ ಕಾನ್ಸಟೇಬಲ್ ಹಾಗೂ ಪೋಲೀಸ್ ಸಬ್-ಇನ್ಸಪೆಕ್ಟರ್ ಸಂಖ್ಯೆಯನ್ನು ಹೆಚ್ಚಿಸಲು ಯಾವುದಾದರೂ ಪ್ರಸ್ತಾವನೆ ಇದೆಯೇ.

ಈ) ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಒಟ್ಟು ಮಹಿಳಾ ಕಾನ್ಸ್‌ಟೇಬಲ್‌ಗಳು - 113

ಒಟ್ಟು ಮಹಿಳಾ ಸಬ್-ಇನ್ಸ್‌ಪೆಕ್ಟರ್‌ಗಳು - 23

ಆ) ಇಲ್ಲ.

ಇ) ಹೌದು.

ಈ) 6 ಮಹಿಳಾ ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಮತ್ತು 261 ಮಹಿಳಾ ಪೋಲೀಸ್ ಕಾನ್ಸಟೇಬಲ್ ಹುದ್ದೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

12.00 ಪಿ.ಎಂ

ಶ್ರೀಮತಿ ಡಿ.ಜಿ. ಹೇಮಾವತಿ : ಇದನ್ನು ಯಾವತ್ತು ಮಾಡುತ್ತೀರಾ ಅದಷ್ಟು ಬೇಗನೆ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಹಿಳಾ ಪೋಲೀಸ್ ಸ್ಟೇಷನ್‌ಗಳನ್ನು ಹೆಚ್ಚು ಮಾಡಬೇಕಾದರೆ ಇದಕ್ಕೆ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗುತ್ತದೆ. ಇವತ್ತು ನಾವು ಸಿಬ್ಬಂದಿಯನ್ನು ನೇಮಕ ಮಾಡಿದರೂ ಕೂಡ ತರಬೇತಿಯಾಗಿ ಇವರು ತಮ್ಮ ಸ್ಥಾನಗಳನ್ನು ತುಂಬಿ ಒಟ್ಟಾಗಿ ಕೆಲಸ ಪ್ರಾರಂಭ